ಕಾಸರಗೋಡು ಜಿಲ್ಲೆಯ ಪೆರ್ಲದಲ್ಲಿ ಹುಟ್ಟಿದ ಶಶಿಕಲಾ ಬಾಯಾರು ಸಾಹಿತ್ಯಪ್ರಿಯರು. ಆದರೆ ತಡವಾಗಿ ಬರವಣಿಗೆ ಆರಂಭಿಸಿದವರು. ಕಸೂತಿಯಲ್ಲಿ ಉನ್ನತ ಪರಿಣತಿ ಸಾಧಿಸಿದ ಅವರು ಅನೇಕ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಪ್ರಶಂಸೆಯನ್ನು ಗಿಟ್ಟಿಸಿಕೊಂಡಿದ್ದಾರೆ. ಪತ್ರಿಕೆಗಳಲ್ಲಿ ಪ್ರಕಟವಾದ ಅನೇಕ ಸಾಂದರ್ಭಿಕ ಪತ್ರಗಳು 'ಪತ್ರಾರ್ಜಿತ' ಎನ್ನುವ ಕೃತಿಯಾಗಿ ಪ್ರಕಟವಾಗಿದೆ.

ಹೋಗಿ ಅವಿತು ಕೂತವ ಮನೆಯೊಂದಿಗೆ ನನ್ನ ಮನದ ಕದವನ್ನೂ ಎಳೆದು ಒಳಗಿದ್ದುಬಿಟ್ಟ! ಇದೊಂದು ಸಮಸ್ಯೆಯ ಮಗುವಾಗುತ್ತಿದೆ ಅನ್ನುವುದು ಮತ್ತೆ ಕೆಲದಿನಗಳಲ್ಲಿ ಮನವರಿಕೆಯಾಯ್ತು. ಅಪ್ಪ ಚಂದ್ರಶೇಖರ ಭಟ್ ಕಾಲೇಜಿನ ಪ್ರಿನ್ಸಿಪಾಲರು. ಅಮ್ಮ ಮಾಲವಿಕಾ ಬ್ಯಾಂಕ್ ಉದ್ಯೋಗಿ. ನನ್ನಣ್ಣನಿಗೆ ಇವರೊಂದಿಗೆ ಮೊದಲೇ ಇದ್ದ ಸ್ನೇಹಬಂಧದಿಂದ ನನಗಿಲ್ಲಿ ನಿಲ್ಲುವ ವ್ಯವಸ್ಥೆಯಾಗಿತ್ತು. ಒಂದು ವಾರ ಬಂದ ಜ್ವರವೇ ಆಕಸ್ಮಿಕವಾಗಿ ನನ್ನವರೊನ್ನೊಯ್ದು ಮೇಲೆ ಬದುಕು ಎದುರಾಗಿ ಬೆದರಿಸತೊಡಗಿತ್ತು. ಅವಿಭಕ್ತ ಕುಟುಂಬದ ಅಷ್ಟೆಲ್ಲ ಮಂದಿ ಒಮ್ಮೆಗೇ ಒಂದಾಗಿ ಅಪರಿಚಿತ ಪರಿಧಿಯಲ್ಲಿ ಸೇರಿಕೊಂಡಿದ್ದರು. ನಾನೊಬ್ಬಳೇ ಹೊರಗಾಗಿಬಿಟ್ಟೆ. ಆಸ್ತಿಯಲ್ಲಿ ಪಾಲು ಕೇಳಿದರೆ ಬಹಳಷ್ಟು ಕೊಡಬೇಕಾಗ್ತಾದೆ ಅನ್ನುವ ಕಾರಣಕ್ಕೂ ನಾನು ಆ ಮನೆಗೆ ಅನಪೇಕ್ಷಿತಳಾದೆ. ಈ ಚಂದ್ರಣ್ಣನ ಸಹಕಾರದಿಂದ ಸಿಕ್ಕಿದ ಟೀಚರ್ ಕೆಲಸ ಮತ್ತು ವಸತಿಯ ಅನುಕೂಲ, ಅತಂತ್ರ ನಿಲುವಿನಲ್ಲಿ ತೂಗುತ್ತಿದ್ದ ಬದುಕಿನ ಬಳ್ಳಿಯನ್ನು ಹಿಡಿದು ಮತ್ತೆ ಗುರಿಯ ಗೂಟಕ್ಕೆ ಬಿಗಿದಂತಾಗಿತ್ತು. ಏಕಾಕಿತನದ ಅಸಹನೀಯಕ್ಕೆ ಅವರ ಸ್ನೇಹ ಸಂಪನ್ನ ಸಾಂತ್ವನವಾಗಿ ಸನ್ನಿಹಿತವಾಗಿತ್ತು. ಈ ತುಂಟ ಹುಡುಗನಂತೂ ಆದ್ಯಂತವಾಗಿ ಆವರಿಸಿ ಹಿಡಿದ. ಅಲ್ಲ, ನಾನೇ ಆವಾಹಿಸಿಕೊಂಡೆನಾ, ಜಾತ್ರೆಯಲ್ಲಿ ಕಳೆದುಹೋದ ಮಗು ಮತ್ತೆ ಸಿಕ್ಕಿದಾಗ ತಬ್ಬಿ ಹಿಡಿದಂತೆ - ಜನ್ಮಾಂತರದ್ದೇನೋ ಅನಿಸುವ ಬಂಧವೊಂದು ತಾನೇ ಬಿಗಿಯಾಯ್ತು. ಮತ್ತೊಂದು ಹೆಣ್ಣುಮಗುವಾದ ಮೇಲೆ ಅವನ ಚುರುಕು ಚೇಷ್ಟೆಗಳು ಅಳತೆಮೀರಿದ್ದುವು. ಹೆಣ್ಣು ಅನ್ನುವ ಮೃದುಭಾವದೊಂದಿಗೆ ಎದೆಗಪ್ಪಿ, ಮೋಹದ ಮುಸುಕಿನೊಳಗೆ ಮುದ್ದಾಡಿಸಿಕೊಳ್ಳುತ್ತಿದ್ದ ಆ ಎಳೆಗೂಸು ಇವನ ಅಮಾಯಕ ಮನಸ್ಸಿಗೆ ಪ್ರತಿಸ್ಪರ್ಧಿಯಾಗಿ ಪರಿಣಮಿಸಿತ್ತು. ಇತ್ತೀಚೆಗೆ ಅವನ ತಂಟೆಗಳೆಲ್ಲ ತಕರಾರುಗಳಾಗಿ, ಮಗುವಿನ ಸುರಕ್ಷೆಯ ಹೊಣೆಯೊಂದಿಗೆ ಅಕ್ಕಪಕ್ಕದವರ ದೂರು ಆರೋಪಗಳಿಗೂ ಉತ್ತರವಾಗಬೇಕಿತ್ತು. ಸದಾಕಾಲ ತಪ್ಪಿತಸ್ಥ ಮನೋಭಾವವಿತ್ತು.

'ಓ, ಬರ್ತಾಯಿದ್ದಾರೆ...' ಅನ್ನುವ ಶಬ್ದಗಳೊಂದಿಗೆ ಒಮ್ಮೆಗೇ ವಾತಾವರಣವೆಲ್ಲ ತ್ವರಿತ ಬಿಸಿಯಲ್ಲಿ ಮೈಮುರಿಯಿತು. ಒಂದೆರಡು ಕಾರುಗಳು ಸಮೀಪಿಸಿ ನಿಂತ ಸದ್ದಾಯಿತು. ತನ್ನ ಕರ್ಕಶ ಹಾರ್ನ್‌ಗಳನ್ನು ಬಳಸದೇ ತೀರಾ ನಿಶ್ಶಬ್ದವಾಗಿ, ಕವಿದ ನಿರಾಕರಣದಲ್ಲಿ ಬಂದು ನಿಂತ ಆಂಬುಲೆನ್ಸ್ ಹತ್ತಿರಕ್ಕೆ ಎಲ್ಲ ಧಾವಿಸತೊಡಗಿದರು. ನಾನೂ ಎದ್ದುನಿಂತೆ. ಆದರೆ, ಕೀಲಿಸಿದ ಕಾಲುಗಳು ಒಂದಿಷ್ಟೂ ಚಲಿಸಲೊಪ್ಪಲಿಲ್ಲ. ಹಿಂದೆ ಬಂದಿದ್ದ ಕಾರುಗಳಿಂದ ಅವರೆಲ್ಲ ಇಳಿದಿರಬೇಕು. ಮಾಲಕ್ಕನ ಆರ್ತನಾದ ಇಡಿಯ ಪರಿಸರವನ್ನೇ ಕಲಸಿ ಕಣ್ಣೀರಾಗಿ ಹರಿಸುವಂತೆ ಕೇಳಿಬರುತ್ತಿತ್ತು. ಜತೆಗಿದ್ದವರ ಸಾಂತ್ವನಗಳೇ ರೋದನಗಳಾಗಿ ವಾತಾವರಣವೆಲ್ಲ ಆಕ್ರಂದನವಾಯ್ತು. ಬೆಂಕಿಯಲ್ಲಿ ಇಡಿಯಾಗಿ ಬೆಂದುಹೋದ ಬಳ್ಳಿಯಂತೆ ಆಕೆ ಅವರು ಹಿಡಿದ ಕೈಕಾಲುಗಳೊಂದಿಗೆ ಎಳೆದ ಹೆಜ್ಜೆಗಳನ್ನು ಊರಲಾರದೇ ಮೆಟ್ಟಿಲೇರುವುದನ್ನು ಕಂಡೆ. ತಲೆಯೇ ಮೇಲೆತ್ತದ ಚಂದ್ರಣ್ಣ, ಒಂದು ಸ್ಥಗಿತ ಯಂತ್ರವನ್ನು ಯಾವುದೋ ಹಗ್ಗಗಳು ಬಿಗಿದು ಎಳೆದಂತೆ ಹಿಂಬಾಲಿಸಿ ಬರುತ್ತಿದ್ದರು. ಅವರೊಂದಿಗೆ ಯಾರೂ ಇಲ್ಲ ಅಂತನಿಸಿತು. ಇನ್ನೂ ಉಳಿದ ಒಂದಿಷ್ಟು ಚೈತನ್ಯವನ್ನೆಲ್ಲಾ ಬಸಿದು ಒಟ್ಟಾಗಿಸಿ ಧಾವಿಸಿ